# ಮೈಸೂರ ಗೆಜಿಟ್ಟು.

ನಂ. 12 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1885.

ಬೆಂಗಳೂರು, ಶನಿವಾರ, ಮಾರ್ಚ್ ತಾ|| 21, ಸನ್ 1885.


ಟಿಪ್ಪಣಿ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.


1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರಸಿಡೆಂಟರು, ಚೀಫ್ ಜಡ್ಜ್‌ರವರು, ಸರ್ವೆ ಮತ್ತು ಇನಾಂ ಸೂಪರ್‌ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕಸ್ ಆಫೀಸರ್‌ಗಳು, ಮೈನೂರು ಸ್ಪೆಷಲ್ ಸೆಟ್ಲ್‌ಮೆಂಟ್ ಆಫೀಸರ್, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೆ ಬಕಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜ್‌ರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್‌ಸೂಪರ್‌ಟೆಂಡೆಂಟರು, ಫಾರೆಸ್ಟ್ ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ಮತ್ತು ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.


## ೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

### ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 27ನೇ ಫಿಬ್ರವರೀ 1885.

ನಂ. 227.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಲೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತ್ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮಗಳು ಇದರಲೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ತಾರೀಖುಗಳಲ್ಲೂ ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುವವು, ಮತ್ತು ಸದರೀ ತಾರೀಖುಗಳಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪರುವಾಗಿ, ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಚೆಡ ದರಖಾಸ್ತುದಾರರಿಗೆ ಹರಾಜ್ ನಿಲ್ಲುವವು.

2. ಪರಂತು ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು, ತಮ್ಮ ಯಖ್ತ್ಯಾರೀಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನು ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ಮತ್ತು ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬವನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಪಡಿಸತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಯೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇವೀಕ್ ಕಂದಾಯದ ಬಾಕೀ ಪೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು; ಹಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ಹರಾಜ್ ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮಾವ್ಯಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಪೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ವೃತ್ತಿಗಳು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಪೆಪ್ಪುಸು ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನಿರ್ಕ್ಸಾ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯಿತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲಿನಲ್ಲಿ ಆಗುವ ಆರ್ಡೈರ್ ಪ್ರಕಾರಮಿಗೆ ಸದರೀ ಕ್ರಯನಾಮೆ ಬಳಪಟ್ಟಿರುತ್ತೆ.

| ತಿಪ್ಪಸ್ತ್ರ. | ತಾಲ್ಲೂಕ್ಕು. | ಹೋಬಳಿ. | ಗ್ರಾಮ. | ಜೋಡೀದಾರರ ಹೆಸರು. | ಅಂದಾಜು ಬೀಜವರೀ. | ಅಂದಾಜು ಹುಟ್ಟುವಳೀ ಯಾ ಬೇರೀಜು. | ನಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟಿ. | ಯಾವಜಾತೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಟ್ಟು ತೊ ಅಂಥಾ ಸರಕಾರದ ಕಂದಾಯದ ಬಾಕಿ. | ಹರಾಜು ತಾರೀಖು ವಗೈರೆ. |
|---|---|---|---|---|---|---|---|---|
| | | | | | ಖಂ. ಕೂ. ಪ. | ರೂ. ಆ. ಪೈ. | ರೂ. ಆ. ಪೈ. | ರೂ. ಆ. ಪೈ. | |
| ಕೋಡೂರು. | ಬೇಲೂರು. | ಬಿಕ್ಕೋಡ್ಲು. | ಮಹಲಾ | ಸುಬ್ಬಾಯ, ಇತರ 16 ಮಂದಿ | 175 34 0 | 279 0 0 | 120 11 0 | 266 0 10 | ಆಮಲ್ದಾರ್ ರೂಬರೂ ಬೇಲೂರು ತಾಲ್ಲೂಕು ಕಛೇರಿಯಲ್ಲಿ 1885ನೇ ಇಸವಿ ಏಪ್ರಿಲ್ 8ನೇ ಮಂಗಳವಾರದಲ್ಲಿ. |
| | | | ಹಣಾಯಿಕನಹಳ್ಳಿ | ಕೊಂಡಿನಾರಾಣಾಚಾರಿ, ಇತರ 9 ಮಂದಿ | 276 7 0 | 562 12 0 | 170 14 0 | 800 13 4 | |
| | | | ಮಲ್ಲೋಗಿರಿ | ಚಿಕ್ಕದಾಸಪ್ಪ ಟ್ಟು, ಇತರ 8 ಮಂದಿ | 917 1 0 | 1,077 8 0 | 346 0 0 | 682 9 4 | ಜಿಟೋ ಜಿಟೋ ಏಪ್ರಿಲ್ 9ನೇ ಮಂಗಳವಾರದಲ್ಲಿ. |
| | | | ಮಲ್ಲಾರಹಳ್ಳಿ | ಕೊಂಡಿನಾರಾಣಾಚಾರಿ ಇತರ 5 ಮಂದಿ | 215 27 0 | 368 4 0 | 94 7 0 | 84 6 8 | |

ತಾರೀಖು 27ನೇ ಫಿಬ್ರವರೀ 1885.

ನಂ. 229.—ಸ್ಯ 1871ನೇ ಇಸವಿ 10ನೇ ನಂಬರ್ ಯಕ್ಸೈಸ್ ಆಕ್ಟಿನ 40ನೇ ಸೆಕ್ಷನ್ ಅನುಸರಿಸಿ ಶ್ರೀಮನ್ ಮಹಾರಾಜ್ರ ಸರ್ಕಾರದವರು, ಇದಕ್ಕೆ ಸಂಬಂಧಪಟ್ಟ ದರೋಬಸ್ತು ಜನಗಳ ನಡವಳಿಕೆ ಬಗ್ಗೆ ಇದರಡೀಕಂಡ ರೂಲ್ಸನ್ನು ಇದರಿಂದ ವಿಧಿಸುತ್ತಾರೆ.

I. ಯಾವ ರೈತನಾಗಲಿ ಅಥವಾ ಇತರ ಮನುಷ್ಯನಾಗಲಿ (ಇದಕ್ಕೆ ಲಗ್ಗತ್ತಾದ * A ನಮೂನೆಯಲ್ಲಿ) ಪಟ್ಟಿ ಯಾ ಲೈಸೆನ್ಸ್ ಲ್ಲದೆ ಮೈಸೂರು ಕೀವೆಯಲ್ಲಿ ಸಣಬು ಸಾಗುವಳಿ ಮಾಡಕೂಡದು. ಸದರೀ ಪಟ್ಟಿ ಯಾ ಲೈಸೆನ್ಸನ್ನು ಯಾವ ತಾಲ್ಲೂಕಿನಲ್ಲಿ ಅಂಥಾ ಸಾಗುವಳಿ ನಡಿಸಲು ಉದ್ದೇಶಿಸಲ್ಪಟ್ಟಿದೆಯೋ ಅಂಥಾ ತಾಲ್ಲೂಕಿನ ಅಮಲ್ದಾರರಿಂದ ಮುಫತ್ ಪಡೆಯಬಹುದು.

II. ಜಿಪ್ಯೂಟಿ ಕಮ್ಮಿಷನರ ಅಥವಾ ಸಂಧರ್ಭಾನುಸಾರ ಸಬ್ ಡಿವೀರ್ಜ ಆಫೀಸರರ ವಿಶೇಷ ಅಪ್ಪಣೆ ಯಿಲ್ಲದೆ ಸರಕಾರದಿಂದ ಮೊಕರರ್ ಮಾಡಲ್ಪಟ್ಟ ಇಜಾರೇದಾರ್ ಯಾ ಮುಂಜಾರ್ಮಾಡಲ್ಪಟ್ಟ ಆತನ ಮುತಾಲೀಕನಲ್ಲದ ಇತರ ಯಾವ ಮನುಷ್ಯನಿಗೂ, ಗಾಂಜಾ ಬಿಕರೀ ಮಾಡಲ್ಪಡತಕ್ಕದ್ದಲ್ಲವು. ಇಜಾರೆದಾರನಿಗೆ ಗಾಂಜಾ ಬಿಕರೀ ಮಾಡಲ್ಪಟ್ಟಾಗ, ಬಿಕರೀ ಜಾಗಾದಿಂದ ತನ್ನ ಕೋಠೀಗೆ ಜಿನಸನ್ನು ಸಾಗಿಸುವ ಬಗ್ಗೆ ಇಜಾರೇದಾರನು ಜಿಪ್ಯೂಟಿ ಕಮ್ಮಿಷನರಿಂದಲಾಗಲಿ ಸಬ್ ಡಿವೀರ್ಜ ಆಫೀಸರಿಂದಲಾಗಲಿ ಬಂದು ಪ್ಯಾಸನ್ನು ಪಡೆಯತಕ್ಕದ್ದು. ಇ ಜಾರೆದಾರನೊಡನೆ ನಡಿಸಲ್ಪಡತಕ್ಕ ಒಡಂಬಡಿಕೆಯು ಇದಕ್ಕೆ ಲಗ್ಗತ್ತಾದ *B ನಮೂನೆಯಲ್ಲಿರತಕ್ಕದ್ದು. ಮತ್ತು ಅದರ ಷರತ್ತುಗಳ ಪ್ರಕಾರ ನಡಿಯಲು ಇಜಾರೇದಾರನು ಬದ್ಧನಾಗಿರತಕ್ಕದ್ದು.

III. ಗಾಂಜಾ ಸಾಗುವಳೀದಾರನಾಗಲಿ ಅಥವಾ ನ್ಯಾಯತಃ ಅದನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ಯಿನ್ಯಾವ ಮನುಷ್ಯನಾಗಲಿ ಮೈಸೂರು ಕೀವೆಯಿಂದ ಆಚೆಗೆ ಗಾಂಜಾವನ್ನು ರಫ್ತು ಮಾಡಲು ಅಪೇಕ್ಷಿಸಿದಾಗ ಅವನು ಆ ಬಗ್ಗೆ ಜಿ|| ಕಮ್ಮಿಷನರಿಗಾಗಲಿ ಸಬ್ ಡಿವೀರ್ಜ ಆಫೀಸರಿಗಾಗಲಿ ಅರ್ಜಿ ಬರಕುಕೊಳ್ಳತಕ್ಕದ್ದು. ಅವರು ಸದರೀ ದಿನಸು ಯಾವ ಡಿಸ್ಟ್ರಿಕ್ಟಿಗೆ ರಫ್ತು ಮಾಡಲ್ಪಡಬೇಕಾಗಿದೆಯೋ ಅಂಥಾ ಡಿಸ್ಟ್ರಿಕ್ಟು ಕಲೆಕ್ಟರವರಿಗೆ ಬರೆದು ಆಬಗ್ಗೆ ಬಂದು ಸ್ಪೆಷಲ್ ಪ್ಯಾಸನ್ನು ಬಗರ ರುಸುಂ ಕೊಡತಕ್ಕದ್ದು.

IV. ಜಿಪ್ಯೂಟಿ ಕಮ್ಮಿಷನರಾಗಲಿ ಸಬ್ ಡಿವೀರ್ಜ ಆಫೀಸರಾಗಲಿ ಯಾವ ಡಿಸ್ಟ್ರಿಕ್ಟಿನಿಂದ ಜಿನಸು ಆಮದ್ ಮಾಡಲ್ಪಡುತ್ತೋ ಅಂಥಾ ಡಿಸ್ಟ್ರಿಕ್ಟು ಅಧಿಕಾರಿಗಳಿಗೆ ಬರದು ತಮ್ಮಿಂದ ಕೊಡಲ್ಪಡುವ ಪ್ಯಾಸ್ ಅನುಸರಿಸಿ ಮೈಸೂರು ಕೀವೆಗೆ ಆಚೆ ಇರುವ ದೇಶಗಳಿಂದ ಗಾಂಜಾವನ್ನು ಆಮದ್ ಮಾಡಲು ಇಜಾರೇದಾರನಿಗೆ ಅವಕಾಶ ಕೊಡಬಹುದು.

V. ಸ್ರ 1871ನೇ ಇಸವಿ 10ನೇ ನಂಬರ್ ಆಕ್ಟು ಅನುಸರಿಸಿ ಮೊಕರರ್ ಮಾಡಲ್ಪಟ್ಟ ಯಕ್ಸೈಸ್ ಆಫೀಸರಗಳು, ಸರಕಾರದಿಂದ ಆಗಿಂದಾಗ್ಗೆ ಮುಂಜಾರ್ ಮಾಡಲ್ಪಡುವ ನಿಬಂಧನೆಗಳನುಸರಿಸಿ ಲೈಸೆನ್ಸು ಪಡೆದ ಸಣಬು ಸಾಗುವಳೀದಾರರ ಜಿಮ್ಮೀಯಲ್ಲಿ ಯಿರುವ ಗಾಂಜಾ ತೇದಾದನ್ನು ತಿಳಿದುಕೊಂಡು ತನಿಖೆ ಮಾಡುವದಕ್ಕೆ ಅವಶ್ಯಕಗಳಾದ ಕೆಲಸಗಳನ್ನು ಮಾಡತಕ್ಕದ್ದು. ಸದರೀ ಸಾಗುವಳೀದಾರರಿಗೆ ಅವರಮನೆ ಖರ್ಚಿನ ಬಗ್ಗೆ 14 ಪೌಂಡ್ ಗಾಂಜಾವನ್ನು ಮಾತ್ರ ಉಳಿಸಿಕೊಳ್ಳುವದಕ್ಕೆ ಅವಕಾಶ ಕೊಡತಕ್ಕದ್ದು.

VI. ಗಾಂಜಾ ಜಿಲ್ಲರೆ ಪುರೋಕ್ತು ಬಗ್ಗೆ ಲೈಸೆನ್ಸುಗಳು, ಜಿಪ್ಯೂಟಿ ಕಮ್ಮಿಷನರಿಂದಲಾಗಲಿ ಸಬ್ ಡಿವೀರ್ಜ ಆಫೀಸರರಿಂದಲಾಗಲಿ ಆಗಿಂದಾಗ್ಗೆ ಸರಕಾರದವರಿಂದ ವಿಧಿಸಲ್ಪಡಬಹುದಾದ ನಮೂನೆಗಳಲ್ಲಿ ಕೊಡಲ್ಪಡತಕ್ಕದ್ದು. ಅಂಥಾ ಲೈಸೆನ್ಸಗಳ ಬಗ್ಗೆ, ಬೆಂಗಳೂರು ಮತ್ತು ಮೈಸೂರು ಷಹರ್‌ಗಳಲ್ಲಿ ತಿವಾಯಿ, ಅನ್ಯತ್ರರುಸುಂ ಏನೂ ವಸೂಲ್ಮಾಡಲ್ಪಡತಕ್ಕದ್ದಲ್ಲವು; ಪರಂತು, ಬೆಂಗಳೂರು ಷಹರಿನಲ್ಲಿ ಪ್ರತಿ ಲೈಸೆನ್ಸಿಗೂ ಮಾಹೆಯಾನಾ 3 ರೂಪಾಯಿ ಪ್ರಕಾರವು, ಮೈಸೂರಲ್ಲಿ ಒಂದು ರೂಪಾಯಿ ಪ್ರಕಾರವು ಫೀಜು ವಸೂಲ್ಮಾಡಲ್ಪಡತಕ್ಕದ್ದು.

VII. ಸ್ರ 1871ನೇ ಇಸವಿ 10ನೇ ನಂಬರ್ ಯಕ್ಸೈಸ್ ಆಕ್ಟು ಅನುಸರಿಸಿ ಜಪ್ತು ಮಾಡಲ್ಪಟ್ಟ ದರೋಬಸ್ತು ಜಿನಸೀಗಳೂ ಮಾಜಿಸ್ಟ್ರೇಟರಿಗಾಗಲಿ, ಜಿಪ್ಯೂಟಿ ಕಮ್ಮಿಷನ್ನರ್ ಯಾ ಸಬ್ ಡಿವೀರ್ಜ ಆಫೀಸರರಿಂದ ಅದನ್ನು ತೆಗದುಕೊಳ್ಳುವ ಬಗ್ಗೆ ಮೊಕರರ್ ಮಾಡಲ್ಪಡುವ ಅಂಥಾ ಇನ್ಯಾವ ಆಫೀಸರರಿಗಾಗಲಿ, ಒಪ್ಪಿಸಲ್ಪಡತಕ್ಕವು. ಜಪ್ತೀ ಮಾಡಲ್ಪಡುವದಕ್ಕೆ ಮಳಪಡುವ ಮತ್ತು ಆಕ್ಟಿನ ನಿಬಂಧನೆಗಳನುಸರಿಸಿ ಜಪ್ತು ಮಾಡಲ್ಪಟ್ಟ ದರೋಬಸ್ತು ಮದ್ದತ್ ಪದಾರ್ಥಗಳೂ ನಾಶಪಡಿಸಲ್ಪಡಬಹುದು, ಅಥವಾ ಜಿಪ್ಯೂಟಿ ಕಮ್ಮಿಷನರಿಂದಲಾಗಲಿ ಸಬ್ ಡಿವೀರ್ಜ ಆಫೀಸರಿಂದಲಾಗಲಿ ಮಂಜೂರ್ಮಾಡಲ್ಪಡಬಹುದಾದ ಒಂದು ನ್ಯಾಯವಾದ ದರದ ವೇರಿಗೆ ಸರಕಾರದ ಇಜಾರೇದಾರನಿಗೆ ಬಿಕರೀ ಮಾಡಲ್ಪಡಬಹುದು.

VIII. ಜಪ್ತು ಮಾಡಲ್ಪಟ್ಟ ಅಂಥಾ ಜಿನಸೀಗಳ ಬಿಕರೀಯಿಂದ ಹುಟ್ಟುವ/ ಆದ ಮೊಬಲಗು ಸದರೀ ಮೊಕದ್ದಮೆಯನ್ನು ವಿಚಾರಣೆ ಮಾಡುವ ಮಾಜಿಸ್ಟ್ರೇಟರಿಂದ ನಿಯಮಿಸಲ್ಪಡುವಂತೆ ಪೂರ್ತಿಯಾಗಿ ಯಾದರೂ ಭಾಗಶಃ ಆದರೂ ಸರಕಾರಕ್ಕೆ ಜಮಾಕಟ್ಟಲ್ಪಡಬಹುದು; ಸದರೀ ಮಾಜಿಸ್ಟ್ರೇಟರು ಆ ಮೊಬಲಗನ್ನು ಪೂರಾ ಆದರು ಅಥವಾ ಭಾಗವಾಗಿಯಾದರು ಯಾರ ಸ್ವೇರಣೆಯಿಂದ ತಪ್ಪು ಆಪಾದಿಸಲ್ಪಟ್ಟು ಜಿನಸು ಜಪ್ತು ಮಾಡಲ್ಪಟ್ಟಿತೋ ಅಂಥಾ ಖಾತಮಿಾದಾರ ಯಾ ಯಕ್ಸೈಸ್ ಆಫೀಸರಿಗೆ ಇನಾಮಾಗಿ ಕೊಡಬಹುದು.

IX. ಗಾಂಜಾ ಮತ್ತು ಮಾಜಿಂ, ಯಾವ ದರದ ವೇರಿಗೆ ಮಾರಲ್ಪಡಬೇಕೋ ಅಂಥಾ ಒಟ್ಟು ಬಿಕರಿ ಮತ್ತು ಚಿಲ್ಲರೆ ಬಿಕರಿ ಬಿರಿಮಿಗಳು ಇದರಡಿ ಕಂಡಂತೆ ಇದರಿಂದ ಠರಾಯಿಸಲ್ಪಟ್ಟಿವೆ.

| | | ಬೆಂಗಳೂರು ವ ಮೈಸೂರು ಷಹರ್‌ಗಳಲ್ಲಿ ಕೇರು 1ಕ್ಕೆ ಬಿರೀದಿ, ಆಣೆಗಳು. | | ಕೀವೆಯ ಉಳಿದ ಭಾಗಗಳಲ್ಲಿ ಕೇರು 1ಕ್ಕೆ ಬಿರೀದಿ, ಆಣೆಗಳು. |
|---|---|---|---|---|
| ಗಾಂಜಾ | ಒಟ್ಟು ಬಿಕರಿ | 10 | .. | 9 |
| | ಚಿಲ್ಲರೆ | 13 | .. | 12 |
| ಮಾಜಿಂ | ಒಟ್ಟು ಬಿಕರಿ | 4 | .. | 4 |
| | ಚಿಲ್ಲರೆ | 6 | .. | 6 |

*ಈ ಸಂಚಿಕೆಯಲ್ಲಿ ಛಾಯಿಪ್ಯಾಡಿರುವದಿಲ್ಲವು.

C ನಮೂನೆ—ಗಾಂಜಾ ಆಮದ್ ಬ್ಯೈ ಪ್ಯಾಸ್.
D ನಮೂನೆ - ಗಾಂಜಾ ರಫ್ತ್ತು ಬ್ಯೈ ಪ್ಯಾಸ್
E ನಮೂನೆ—ಗಾಂಜಾ ಸ್ಥಳಾಂತರ ಪಡಿಸಲಿಕ್ಕೆ ಪ್ಯಾ
F ನಮೂನೆ—ಕೋಠಿಗಳಿಗೆ ರವಾನಿಸಿದ ಗಾಂಜಾ ಬ್ಯೈಗು ತ್ತಿಗೆದಾರನ ಪ್ಯಾಸ
G ನಮೂನೆ—ಕೋಠಿಗಳಿಂದ ಚಿಲ್ಲರೆ ಅಂಗಡಿಗಳಿಗೆ ಗಾಂಜಾ ಸಾಗಿಸುವ ಬ್ಯೈ ಪ್ಯಾಸ್
H ನಮೂನೆ—ಒಟ್ಟು ಬಿಕರೀ ಲೈಸೆನ್ಸ್
I ನಮೂನೆ—ಚಿಲ್ಲರೆ ಬಿಕರಿ ಬ್ಯೈ ಲೈಸೆನ್ಸ್
J ನಮೂನೆ—ಕೋಠಿ ವರ್ಗದ ಬುಕ್ಕು
K ವ L ನಮೂನೆಗಳು—ಒಟ್ಟುಬಿಕರಿ ಕೋಠಿಗಳಲ್ಲಿ ದಿನವಹಿ ಬಿಕರಿಆಗುವ ಗಾಂಜಾ ಮತ್ತು ಮಾಜಿಮಿನ ಲೆಕ್ಕ
M ನಮೂನೆ—ಚಿಲ್ಲರೆ ಅಂಗಡಿ ಲೆಕ್ಕದ ಬುಕ್ಕು

X. ಮಾರ್ಜಿನ್ನಲ್ಲಿ ನಮೂದು ಮಾಡಲ್ಪಟ್ಟ ಇವಕ್ಕೆ *ಲಗತ್ತಾದ ಲೈಸೆನ್ಸುಗಳು, ಲೆಕ್ಕಗಳು ಪ್ಯಾಸ್ ವಗೈರೆಗಳ ನಮೂನೆಗಳು ಆಕರಣಿ ಬ್ಯೈ ಇದರಿಂದ ವಿಧಿಸಲ್ಪಟ್ಟಿರುತ್ತೆ.

XI. ಗಾಂಜಾವನ್ನು ತಮ್ಮ ಜಿಮ್ಮೀಯಲ್ಲಿ ಯಿಟ್ಟು ಕೊಳ್ಳಲಿಕ್ಕೆ ಕಾರ್ನೂವೇರಿಗೆ ಅಧಿಕಾರ ಪಡೆಯದೆ ಯಿರುವ ದರೋಜನ್ನು ಜನಗಳೂ, ತಾವು ವಾಸಾಮಾಡುವ ತಾಲ್ಲೂಕಿನ ಅಮಲ್ದಾರರಿಗೆ ತಮ್ಮ ಜಿಮ್ಮೀಯಲ್ಲಿರುವ ತೇವಾದನ್ನು ತಿಳಿಸಿ ಅದನ್ನು ಯಿಟ್ಟುಕೊಳ್ಳಲಿಕ್ಕೆ ಅವರಿಂದ ಬಂದು ಅಪ್ಪಣೆ ಪತ್ರವನ್ನು ಪಡೆಯತಕ್ಕದ್ದು. ಸದರೀ ಜಿನಸು ಮನುಷ್ಯರ ಉಪಯೋಗಕ್ಕೆ ಅರ್ಹವಾಗಿದ್ದರೆ ಅದು 1885ನೇ ಇಸವಿ ಏಪ್ರೀಲ್ ಗುರ್ರೀ ಲಾಗಾಯತು 3 ತಿಂಗಳೊಳಗಾಗಿ ಸರಕಾರದ ಗಾಂಜಾ ಇಜಾರೆದಾರನಿಗೆ ವಿಕ್ರಯಿಸಲ್ಪಡತಕ್ಕದ್ದು. ಅಥವಾ ಮೇಲ್ಕಂಡ III ನೇ ವ್ಯಾರಾ ಅನುಸರಿಸಿ ಕೊಡಲ್ಪಡುವ ಒಂದು ಪ್ಯಾಸ್‌ನಿನಿ ಮೈಸೂರು ಸೀಮೆಯಿಂದ ಆಜಿಗೆ ರಫ್ತ್ತು ಮಾಡಲ್ಪಡತಕ್ಕದ್ದು. ಮನುಷ್ಯರ ಉಪಯೋಗಕ್ಕೆ ಅನರ್ಹವಾಗಿದ್ದ ಪಕ್ಷದಲ್ಲಿ ಡೆಪ್ಯುಟಿ ಕಮ್ಮಿಷನರ ಅಥವಾ ಸಬ್ ಡಿವೀಜ್ಯ ಆಫೀಸರರ ಮುಕ್ತಂ ಮೇರಿಗೆ ನಾಶ ಪಡಿಸಲ್ಪಡತಕ್ಕದ್ದು..

XII. ಈ ರೂಲ್ಸ್ ಸ್ರ್ 1885ನೇ ಇಸವಿ ಏಪ್ರೀಲ್ ಗುರ್ರೀ ಲಾಗಾಯತು ಜಾರೀಲಿ ಬರತಕ್ಕದ್ದು.

ತಾರೀಖು 10ನೇ ಮಾರ್ಚೀ 1885.

ನಂ. 235.—ಸ್ರ್ 1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷ್ನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಇದರಿಂದ ಉದಹರಿಸುವದೇನಂದರೆ, ಇದರ ಕೆಳಗೆ ತಪಸೀಲ್ ಕಾಣಿಸಿರುವ ನಿವೇಶನಗಳು ಸರ್ಕಾರ ಕೆಲ್ಸಕೋಸ್ಕರ ಆವಶ್ಯಕವಾಗಿರುತ್ತೆ; ಯಾವ ಬ್ಗೈಂದರೆ:—ಮೈಸೂರಲ್ಲಿ ಜರ್ಗವೋರ್ಹ್ ಪ್ಯಾಲೆಸ್ ಹಿಂದುಗಡೆ ಒಂದು ಪಬ್ಲಿಕ್ ಪಾರಕ್ ಯಾನೇ ಚಕ್ರ್ ತಯಾರ್ಮಾಡುವ ಬ್ಗೈ ಬೇಕಾಗಿರುತ್ತೆ.

| ಡಿಸ್ಟ್ರಿಕ್ಟು, ತಾಲ್ಲೂಕು, ಸ್ಥಳ. | ನಿವೇಶನಗಳ ತಪಸೀಲು. | ಸ್ವಂತಗಾರರ ಹೆಸರು. | ಜಕ್ಕು ಬಂದಿ. | ವಿಸ್ತೀರ್ಣ |
|---|---|---|---|---|
| ಮೈಸೂರು ಡಿ ಸ್ಟ್ರಿಕ್ಟು, ಮೈಸೂರು ತಾಲ್ಲೂಕು, ಮೈಸೂರು ಷಹರ್ | ಜರ್ಗವೋರ್ಹ ಮೆಹಲಿನ ಹಿಂಭಾಗದ ರಸ್ತೆ ಮತ್ತು ದೇವರಾಜ ಮೊಹಲ್ಲಾದಲ್ಲಿರುವ ಒಂದು ಹಂಚಿನಮನೆ. | ಕುಂಬಾರ ದೊಡ್ಡಯ್ಯ | ಪೂರ್ವಕ್ಕೆ—ಪಬ್ಲಿಕ್ ರೋಡು<br>ದಕ್ಷಿಣಕ್ಕೆ—ಮ್ಯುನಿಸಿಪಲ್ ಬೋರ್ಡಿನಿಂದ ಯಿದಕ್ಕೆ ಮೊದಲೆ ಬೀರೀದಿಗೆ ತೆಗದು ಕೊಂಡ ದೊಡ್ಡರಾಮಲಿಂಗ ಮತ್ತು ಜೋಗಯ್ಯನ ಮನೆಗಳು<br>ಪಶ್ಚಿಮಕ್ಕೆ—ಹೆಂಗಸರ ಆಸಪತ್ರೆ, ಪೆಂಚರೇರ ಮನೆಗಳ ಮೇಲ್ಭಾಗದ ರಸ್ತೆ<br>ಉತ್ತರಕ್ಕೆ—ಮ್ಯುನಿಸಿಪಲ್ ಬೋರ್ಡಿನವರು ಕೊಂಡುಕೊಂಡ ಜೋಗಯ್ಯನ ಮನೆ | 240 × 40 ಸಲಿಅಡಿಗಳು. |
| ಡಿಟೋ | ಡಿಟೋ | ಮುರಾದ್‌ಸಾಹೆಬ | ಪೂರ್ವಕ್ಕೆ—ಸರ್ಕಾರ ರಸ್ತೆ<br>ಪಶ್ಚಿಮ ವ ದಕ್ಷಿಣಕ್ಕೆ—ಮ್ಯುನಿಸಿಪಲ್ ಪಾಳು ಭೂಮಿ ಮತ್ತು ಹೆಂಗಸರ ಆಸಪತ್ರೆ<br>ಉತ್ತರಕ್ಕೆ—ವೆಂಕಟರಾಮಯ್ಯನವರ ಮನೆ | 76 × 76 ಸಲಿಅಡಿಗಳು. |

*ಈ ಸಂಬಿಕೆಯಲ್ಲಿ ಛಾಯಿಪ್ಯಾಡಿರುವದಿಲ್ಲವು.